ಈ) ಮೈಸೂರು ನಗರದಲ್ಲಿ ಹೊಸ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸುವ ವಿಷಯ ಸದ್ಯಕ್ಕೆ ಚಿಂತನೆಯಲ್ಲಿ ಇರುವುದಿಲ್ಲ

798 (1193) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನಲ್ಲಿ ನಿರ್ಮಿಸುತ್ತಿರುವ ಹೊಸ ತಾಲ್ಲೂಕು ಕಛೇರಿ ನಿರ್ಮಾಣ ಕಾರ್ಯವನ್ನು ಪ್ರಾರಂಬಿಸಿದ್ದು ಯಾವಾಗ ಹಾಗೂ ಇದರ ಅಂದಾಜು ವೆಚ್ಚ ಎಷ್ಟು ,

ಆ) ಉದ್ದೇಶಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಯೋಜಿಸಿರುವ ಕಛೇರಿಗಳು ಯಾವುವು ,

ಇ) ಈ ಕಟ್ಟಡದಲ್ಲಿ ಬರುವ ಕೊರಡಿಗಳ ಸಂಖ್ಯೆ ಎಷ್ಟು ,

ಈ) ನಿರ್ಮಿಸಲಾಗುತ್ತಿರುವ ತಾಲ್ಲೂಕು ಕಛೇರಿಯ ಕಟ್ಟಡ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಈ ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ 28 4 2005 ಈ ಕಾಮಗಾರಿಯ ಅಂದಾಜು ಮೊತ್ತ ರೂ 600 00 ಲಕ್ಷಗಳು

ಆ) ಉದ್ದೇಶಿತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಲು ಯೋಜಿಸಿರುವ ಕಛೇರಿ ವಿವರಗಳು

1 ಮೈಸೂರು ತಾಲ್ಲೂಕು ಕಛೇರಿ
2 ಸಹ ನಿರ್ದೇಶಕರು, ಭೂ ದಾಖಲೆಗಳ ಇಲಾಖಾ ಕಛೇರಿ
3 ಉಪ ನೋಂದಣಾಧಿಕಾರಿಗಳ ಕಛೇರಿ (ಉತ್ತರ ಮತ್ತು ದಕ್ಷಿಣ)
4 ತಾಲ್ಲೂಕು ಪಂಚಾಯಿತಿ ಕಛೇರಿ (ಉತ್ತರ ಮತ್ತು ದಕ್ಷಿಣ)
5 ಕೃಷಿ ಉಪ ನಿರ್ದೇಶಕರ ಕಛೇರಿ

ಇ)1 ಬೇಸ್‌ಮೆಂಟ್ ಅಂತಸ್ತು – ವಾಹನ ನಿಲುಗಡೆಗಾಗಿ
2 ನೆಲ ಅಂತಸ್ತು – 13 ಕೊರಡಿಗಳು
3 ಮೊದಲನೇ ಅಂತಸ್ತು – 14 ಕೊರಡಿಗಳು
4 ಎರಡನೇ ಅಂತಸ್ತು – 16 ಕೊರಡಿಗಳು

ಈ) ಈ ಕಾಮಗಾರಿಯ ನಿರ್ಮಾಣದ ಕೆಲಸ ಆಗಸ್ಟ್ 2007ರೊಳಗೆ ಪೂರ್ಣಗೊಳಿಸಲಾಗುವುದು

799 (1194) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯಾದ್ಯಂತ ಇರುವ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಯಾವುವು,

ಆ) ಈ ಕೈಗಾರಿಕೆಗಳ ಪೈಕಿ ಮಹಿಳಾ ಉದ್ಯಮಿಗಳು ನಡೆಸುತ್ತಿರುವ ಕೈಗಾರಿಕೆಗಳು ಯಾವುವು ,